# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 335(279) |
| ಸದಸ್ಯರ ಹೆಸರು | : | ಡಾ. ತಳವಾರ್‌ಸಾಬಣ್ಣ |
| ಉತ್ತರಿಸುವ ದಿನಾಂಕ | : | 18.07.2024 |
| ಉತ್ತರಿಸುವ ಸಚಿವರು | : | ಸನ್ಮಾನ್ಯ ಮುಖ್ಯಮಂತ್ರಿಯವರು. |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಕೋಲಿ/ಕಬ್ಬಲಿಗ/ ಬೆಸ್ತ ಮತ್ತು ಪರ್ಯಾಯ ಪದಗಳನ್ನು ಪರಿಶಿಷ್ಟ ಪಂಗಡದ (ಎಸ್.ಟಿ) ಪಟ್ಟಿಯಲ್ಲಿ ಸೇರಿಸಬೇಕು ಎಂದು ಕರ್ನಾಟಕ ಸರ್ಕಾರ ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆ ಕಳಿಸಿರುವುದು ನಿಜವೇ; | ಹೌದು, |
| ಆ) | ಕೇಂದ್ರ ಸರ್ಕಾರದ ರಿಜಿಸ್ಟ್ರಾರ್ ಜನರಲ್ ಆಫ್ ಇಂಡಿಯಾ (ಆರ್. ಜಿ. ಐ) ರವರು ಕೋಲಿ/ ಕಬ್ಬಲಿಗ/ ಬೆಸ್ತ ಮತ್ತು ಪರ್ಯಾಯ ಪದಗಳನ್ನು ಗಂಗಾಮತ ಎಂಬ ಗುಂಪಿನಲ್ಲಿ ಸೇರಿಸಲಾಗಿದೆ ಎಂದು ಪ್ರಸ್ತಾವನೆಯನ್ನು ದಿನಾಂಕ: 30-10-2023ರಂದು ರಾಜ್ಯ ಸರ್ಕಾರಕ್ಕೆ ಹಿಂದಿರುಗಿಸಿರುವುದು ನಿಜವೇ; | ಹೌದು,<br>ಕೇಂದ್ರ ಸರ್ಕಾರದ ರಿಜಿಸ್ಟ್ರಾರ್ ಜನರಲ್ ಆಫ್ ಇಂಡಿಯಾ ರವರ ಪತ್ರ ಸಂಖ್ಯೆ: F.No. 8/1/2014-SS ದಿನಾಂಕ:30-10-2023ರ ಪತ್ರದಲ್ಲಿ ಸದರಿ ಪ್ರಸ್ತಾವನೆಯನ್ನು ಬೆಂಬಲಿಸಿರುವುದಿಲ್ಲವೆಂದು ತಿಳಿಸಿರುತ್ತಾರೆ. |
| ಇ) | ಸದರಿ ಪ್ರಸ್ತಾವನೆಯನ್ನು ವಾಪಸ್ಸು ಬಂದಿದ್ದರೆ ರಾಜ್ಯ ಸರ್ಕಾರವು ಯಾವ ಕ್ರಮವನ್ನು ಕೈಗೊಳ್ಳುತ್ತದೆ; | ಪ್ರಸ್ತಾಪಿತ ಸಮುದಾಯಗಳನ್ನು ಪರಿಶಿಷ್ಟ ಪಂಗಡಕ್ಕೆ ಸೇರಿಸಲು ಸೂಕ್ತ ಸಮರ್ಥನೆಗಳೊಂದಿಗೆ ಹಲವಾರು ಬಾರಿ ಪ್ರಸ್ತಾವನೆಯನ್ನು ಕಳುಹಿಸಿದ್ದರೂ ಕೇಂದ್ರ ಸರ್ಕಾರದ ಆಫೀಸ್ ಆಫ್ ದಿ ರಿಜಿಸ್ಟ್ರಾರ್ ಜನರಲ್ ಆಫ್ ಇಂಡಿಯಾ ರವರು ಒಪ್ಪಿರುವುದಿಲ್ಲ. |
| ಈ) | ಅತ್ಯಂತ ಹಿಂದುಳಿದ ಜಾತಿ ಕೋಲಿ/ಕಬ್ಬಲಿಗ/ಬೆಸ್ತ ಮತ್ತು ಇತರ ಪರ್ಯಾಯಾ ಪದಗಳನ್ನು ಎಸ್.ಟಿ ಪಟಿಯಲ್ಲಿ ಸೇರಿಸಲು ಸುಮಾರು ನಲವತ್ತು ವರ್ಷಗಳಿಂದ ನಡೆಯುತ್ತಿರುವ ಹೋರಾಟಕ್ಕೆ ಸರ್ಕಾರದ ಪ್ರತಿಕ್ರಿಯೆ ಏನು; | ಮುಂದುವರೆದು, ಭಾರತದ ಸಂವಿಧಾನದ ಅನುಚ್ಛೇದ-342(2) ರ ಪ್ರಕಾರ ಯಾವುದೇ ಜಾತಿಯನ್ನು ಪರಿಶಿಷ್ಟ ಪಂಗಡಗಳ ಪಟ್ಟಿಗೆ ಸೇರಿಸಲು ಭಾರತದ ಸಂಸತ್ತಿಗೆ ಮಾತ್ರ ಅಧಿಕಾರವಿರುತ್ತದೆ. ರಾಜ್ಯ ಸರ್ಕಾರಕ್ಕೆ ಸೇರಿಸುವ ಅಧಿಕಾರವಿರುವುದಿಲ್ಲ. |
| ಉ) | ಕೋಲಿ/ಕಬ್ಬಲಿಗ/ಬೆಸ್ತ/ಬಾರಿಕ/ಅಂಬಿಗಾ/ಮೊಗವೀರ ಪರ್ಯಾಯ ಪದಗಳನ್ನು ಮಾತ್ರ ಎಸ್.ಟಿ ಪಟ್ಟಿಯಲ್ಲಿ ಸೇರಿಸಲು ಮತ್ತೊಮ್ಮೆ ಹೊಸದಾಗಿ ಪ್ರಸ್ತಾವನೆಯನ್ನು ಕಳುಹಿಸಿ ತೀರಾ ಹಿಂದುಳಿದ ಈ ಸಮುದಾಯಕ್ಕೆ ನ್ಯಾಯ ಒದಗಿಸಲು ಸರ್ಕಾರ ಪ್ರಯತ್ನಿಸುವುದೇ? | ಕೋಲಿ/ಕಬ್ಬಲಿಗ/ಬೆಸ್ತ/ಬಾರಿಕ/ಅಂಬಿಗಾ/ಮೊಗವೀರ ಪರ್ಯಾಯ ಪದಗಳನ್ನು ಪರಿಶಿಷ್ಟ ಪಂಗಡಗಳ ಪಟ್ಟಿಗೆ ಸೇರಿಸಲು ಮತ್ತೊಮ್ಮೆ ಪ್ರಸ್ತಾವನೆ ಬಂದಲ್ಲಿ ಪರಿಶೀಲಿಸಲಾಗುವುದು. |

STW/SECB/SAD/103/2024

(ಸಿದ್ದರಾಮಯ್ಯ)
ಮುಖ್ಯಮಂತ್ರಿ